# ಕಲಿಕೆಯ ಮೂಲೆಗಳು ಮತ್ತು ಅನುಸರಣೆಯ ಚಟುವಟಿಕೆಗಳು

ದಾಸಣ್ಣ ಮರೆಡ್ಡಿ ಮತ್ತು ವಿ ಕೋಟೇಶ್ವರ ರಾವ್

ಪುಟ್ಟ ಮಕ್ಕಳು ಸಕ್ರಿಯ ಪರಿಶೋಧನೆ, ಆಟ ಮತ್ತು ಸಾಮಾಜಿಕವಾಗಿ ಬೆರೆಯುವುದರ ಮೂಲಕ ಕಲಿಯುತ್ತಾರೆ. ಕಲಿಕೆಯ ಪ್ರಕ್ರಿಯೆಯು ಅರಿವು, ಪರಿಶೋಧನೆ, ವಿಚಾರಣೆ, ಮತ್ತು ಹೊಸ ಜ್ಞಾನದ ಬಳಕೆಯನ್ನು ಒಳಗೊಂಡಿರುತ್ತದೆ.

ಮಕ್ಕಳ ಕಲಿಕೆಯ ಹಂತಗಳು ಹೀಗಿವೆ:

- ಸರಳತೆಯಿಂದ ಸಂಕೀರ್ಣತೆಯೆಡೆಗೆ: ಮಕ್ಕಳು ಮೂಲಭೂತವಾದುದರೊಂದಿಗೆ ಆರಂಭಿಸಿ, ಹೆಚ್ಚು ಸಂಕೀರ್ಣತೆಯುಳ್ಳ ತಂತ್ರಗಳ ಮೇಲೆ ಹಿಡಿತ ಸಾಧಿಸುವತ್ತ ಸರಿಯುತ್ತಾರೆ.
- ತಿಳಿದಿರುವುದರಿಂದ ತಿಳಿದಿರದುದರೆಡೆಗೆ/ ಪರಿಚಿತವಾಗಿರುವುದರಿಂದ ಅಪರಿಚಿತವಾದುದರೆಡೆಗೆ: ಮಕ್ಕಳು ಭಾಷೆಯ ಪೂರ್ವಸಿದ್ಧ ಜ್ಞಾನದೊಂದಿಗೆ ಹಾಗೂ ತಮ್ಮ ಚಿರಪರಿಚಿತ ಜಗತ್ತಿನಿಂದ ಬರುತ್ತಾರೆ; ಅವರು ತಮ್ಮ ಪೂರ್ವಜ್ಞಾನದ ತಳಹದಿಯ ಮೇಲೆ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ.
- ಮೂರ್ತದಿಂದ ಅಮೂರ್ತದೆಡೆಗೆ: ತಾವು ಸ್ಪರ್ಶಿಸಬಹುದಾದ, ಅನುಭವಿಸಬಹುದಾದ, ಕುಶಲತೆಯಿಂದ ಬಳಸಬಹುದಾದ ಮೂರ್ತ ಸಾಮಗ್ರಿಗಳೊಂದಿಗಿನ ಮಕ್ಕಳ ಕಲಿಕೆ ಅತ್ಯುತ್ತಮವಾಗಿರುತ್ತದೆ ಹಾಗೂ ಮುಂದೆ ತಮ್ಮ ಕಲ್ಪನೆಯನ್ನು ಬಳಸಿ ತಿಳಿದುಕೊಳ್ಳಬೇಕಾದ ಅಮೂರ್ತ ವಿಷಯಗಳೊಂದಿಗೆ ಸಂಬಂಧ ಕಂಡುಕೊಳ್ಳಲು ಇದನ್ನು ಬಳಸುತ್ತಾರೆ.

## ಕಲಿಕೆಯ ಮೂಲೆಗಳು

ಆರಂಭಿಕ ಶಿಕ್ಷಣ ತರಗತಿಯಲ್ಲಿ, ಮಕ್ಕಳು ಜ್ಞಾನದ ಸೃಷ್ಟಿಯಲ್ಲಿ ತೊಡಗುತ್ತಾರೆ. ಹೊಸ ಪರಿಕಲ್ಪನೆಗಳನ್ನು ತಿಳಿಯುತ್ತಾರೆ, ಮತ್ತು ವಿವಿಧ ಬೋಧನ ಚಟುವಟಿಕೆಗಳ ಮೂಲಕ ತಮ್ಮ ಕೌಶಲಗಳನ್ನು ಮೊನಚುಗೊಳಿಸುತ್ತಾರೆ. ಮಕ್ಕಳಲ್ಲಿ ಉತ್ತಮ ರೀತಿಯ ಕಲಿಕೆಯಾಗುವುದನ್ನು ಸುಗಮಗೊಳಿಸಲು, ಅಧ್ಯಾಪಕರು ಮಕ್ಕಳ ಕಲಿಕೆಯನ್ನು ಗಟ್ಟಿಗೊಳಿಸಲು ಅವಕಾಶಗಳನ್ನು ಸೃಷ್ಟಿಸುವಂತೆ ಮೊದಲೇ ಯೋಜನೆ ಮಾಡಿಕೊಳ್ಳುವುದು ಮುಖ್ಯ. ಕಲಿಕೆಯ ಮೂಲೆಗಳಲ್ಲಿ ಆಟವಾಡುವುದು ಇಂತಹ ಚಟುವಟಿಕೆಗಳಲ್ಲಿ ಒಂದಾಗಿದ್ದು, ಅಧ್ಯಾಪಕರ ಮಾರ್ಗದರ್ಶನದಲ್ಲಿ ನಡೆಸಿದ ಚಟುವಟಿಕೆಗಳಲ್ಲಿ ಕಲಿತ ಪರಿಕಲ್ಪನೆಗಳನ್ನು ಪರಿಶೋಧಿಸಲು, ಬೆಲೆಕಟ್ಟಲು, ಹಾಗೂ ಗಟ್ಟಿಗೊಳಿಸಲು ಮಕ್ಕಳಿಗೆ ಇಲ್ಲಿ ಅವಕಾಶ ಒದಗಿಬರುತ್ತದೆ.

ಕಲಿಕೆಯ ಕೇಂದ್ರಗಳೆಂದೂ ಕರೆಯಲ್ಪಡುವ ಈ ಕಲಿಕೆಯ ಮೂಲೆಗಳು ತರಗತಿಯಲ್ಲಿ ಆಟದ ಸಾಮಗ್ರಿಗಳನ್ನು ಉದ್ದೇಶಪೂರ್ವಕವಾಗಿ ಜೋಡಿಸಿಡುವ ವ್ಯವಸ್ಥೆಯನ್ನು ಒಳಗೊಂಡಿವೆ. ಇಲ್ಲಿ ಮಕ್ಕಳಿಗೆ ಪರಿಶೋಧಿಸುವ, ವಸ್ತುಗಳನ್ನು ನಿರ್ಮಿಸುವ, ಪ್ರಯೋಗ ಮಾಡಿ ನೋಡುವ, ಹಾಗೂ ತಮ್ಮದೇ ಆದ ಆಸಕ್ತಿಗಳ ಬೆನ್ನತ್ತುವ ಅವಕಾಶ ದೊರಕುತ್ತದೆ. ಪ್ರತಿ ಕಲಿಕೆಯ ಮೂಲೆಯು ಒಂದು ನಿರ್ದಿಷ್ಟ ವಿಷಯದ ಮೇಲೆ ಕೇಂದ್ರೀಕರಿಸುತ್ತದೆ ಹಾಗೂ ಅದರಲ್ಲಿ ಮಕ್ಕಳು ಬಗೆಬಗೆಯಾಗಿ ಭಾಗವಹಿಸುವುದಕ್ಕೆ ಅನುವು ಮಾಡಿಕೊಡುತ್ತದೆ. ತೆಲಂಗಾಣದ ಅಂಗನವಾಡಿ ಕೇಂದ್ರಗಳಲ್ಲಿ, ಅಧ್ಯಾಪಕರು ನಾಲ್ಕು ಕಲಿಕೆಯ ಮೂಲೆಗಳನ್ನು ಆಯೋಜಿಸುವಂತೆ ಪ್ರೇರೇಪಿಸಲಾಗುತ್ತದೆ.

### ನಾಟಕದಾಟದ ಮೂಲೆ

ದೃಶ್ಯ: ಅಂಗನವಾಡಿಯೊಂದರಲ್ಲಿ ನಾಟಕದಾಟದ ಮೂಲೆಯಲ್ಲಿ ಇಟ್ಟಿರುವ ಡಾಕ್ಟರ್ ಸೆಟ್ ಜೊತೆ ಆಟವಾಡುತ್ತಿರುವ ಮಕ್ಕಳು.

1ನೇ ಮಗು: ಈಗ ನಾನು ಡಾಕ್ಟರ್ ಆಗುವೆ (ಸಹಾಯಕಿ/ದಾದಿಯಾಗಿ ಪಾತ್ರ ಮಾಡುತ್ತಿದ್ದ ಈ ಮಗು ಈಗ ಡಾಕ್ಟರ್ ಪಾತ್ರ ಮಾಡಬಯಸುತ್ತಿದೆ.)

2ನೇ ಮಗು: ನೀನು ಆಮೇಲೆ ಡಾಕ್ಟರ್ ಆಗು, ಈಗ ನಾನು ಡಾಕ್ಟರ್ ಆಗಿರುವೆ (ಡಾಕ್ಟರ್ ಆಗಿ ನಟಿಸುತ್ತಿರುವ ಈ ಮಗು ಹಾಗೆಯೇ ಮುಂದುವರಿಯಬೇಕೆಂದು ಬಯಸುತ್ತಿದೆ.)

1ನೇ ಮಗು: ನಾನು ಡಾಕ್ಟರ್ ಆಗಬೇಕು (ಮೊದಲ ಮಗು ಪಟ್ಟು ಹಿಡಿದಿದೆ).

2ನೇ ಮಗು: ನನಗೆ ಎರಡು ಬಾರಿ ಡಾಕ್ಟರ್ ಆಗಲು ಬಿಡು (ಮಗು ಎರಡು ಬೆರಳು ಎತ್ತಿ ಹಿಡಿದಿದೆ).

ಈ ಮಗು ಎರಡು ಬಾರಿ ಡಾಕ್ಟರ್ ಆಗಿ ಮುಂದುವರಿದು, ನಂತರ ಇನ್ನೊಂದು ಮಗುವಿಗೆ ಡಾಕ್ಟರ್ ಆಗುವ ಅವಕಾಶ ಕೊಟ್ಟಿತು.

ಮೇಲಿನ ಕಿರುಪ್ರಬಂಧದಲ್ಲಿ, ಇಬ್ಬರು ಮಕ್ಕಳ ನಡುವೆ ಪಾತ್ರ ವಿನಿಮಯದ ಕುರಿತಾಗಿ ಸ್ಪಷ್ಟವಾದ ಸಂಧಾನ ನಡೆದಿದೆ. ಎರಡನೆಯ ಮಗು 'ಎರಡು' ಸಂಖ್ಯೆಯ ಪರಿಕಲ್ಪನೆಯನ್ನು ಈ ಸಂಧಾನದಲ್ಲಿ ಬಳಕೆ ಮಾಡಿತು.

ಮಕ್ಕಳಲ್ಲಿ ನಾಟಕದಾಟದ ಯೋಚನೆಯು ಸಾಮಾಜಿಕ ಪಾತ್ರಗಳು ಮತ್ತು ನಿಜ ಜೀವನದ ಘಟನೆಗಳನ್ನು ಅವರು ಅರ್ಥ ಮಾಡಿಕೊಳ್ಳುವ ರೀತಿಯಿಂದ ಪ್ರೇರಿತವಾಗಿದೆ. ಹಾಗಾಗಿ, 'ಅಮ್ಮ' ಮತ್ತು 'ಅಪ್ಪ'ನಾಗಿ ನಟಿಸಲು ಬೇಕಾದ ಸರಕು ಸಾಮಗ್ರಿಗಳು ಇಲ್ಲಿ ಜೋಡಿಸುವ ಮೊದಲ ವಸ್ತುಗಳಾಗಿವೆ. ನಾಟಕದಾಟವನ್ನು ಸುಗಮಗೊಳಿಸಲು ಅಧ್ಯಾಪಕರು ವಿಭಿನ್ನ ವಸ್ತುಗಳನ್ನು ತಯಾರಿ ಮಾಡಿಟ್ಟುಕೊಳ್ಳುತ್ತಾರೆ. ಇವುಗಳಲ್ಲಿ ಡಾಕ್ಟರುಗಳು, ದಿನಸಿ ಮಾರಾಟಗಾರರು, ಅಗ್ನಿಶಾಮಕ ಸಿಬ್ಬಂದಿ ಬಳಸುವ ಸಾಮಗ್ರಿಗಳು ಇರುತ್ತವೆ. ಇವುಗಳನ್ನು ಮಕ್ಕಳ ನಡುವೆ ಅವರ ಆಸಕ್ತಿಯ ಆಧಾರದ ಮೇಲೆ ಹಂಚಬಹುದು. ಒಂದು ನಾಟಕದಲ್ಲಿ ಪಾತ್ರವಹಿಸುವಾಗ, ಮಕ್ಕಳು ಆ ಪಾತ್ರದ ಒಳಹೊಕ್ಕು, ಆ ಪಾತ್ರವು ಅನುಭವಿಸಬಹುದಾದ ಭಾವನೆಗಳನ್ನು ಹೊರಹಾಕುವ ಅವಕಾಶವನ್ನು ಅಧ್ಯಾಪಕರು ಮಾಡಿಕೊಡುತ್ತಾರೆ. ಇಂತಹ ವಿಭಿನ್ನ ಪಾತ್ರಗಳನ್ನು ಅನುಕರಿಸುವ ಮಾಡುವ ಮೂಲಕ ಮಕ್ಕಳಿಗೆ ವಿವಿಧ ಸಂಬಂಧಗಳ, ವಿಭಿನ್ನ ಸಾಮಾಜಿಕ ಪಾತ್ರಗಳನ್ನು ಮತ್ತು ಅವರು ಮಾಡುವ ಕೆಲಸಗಳ ಬಗ್ಗೆ ತಮ್ಮ ಅರಿವನ್ನು ಗಟ್ಟಿಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಷ್ಟು ಮಾತ್ರವಲ್ಲದೆ, ಇತರ ಮಕ್ಕಳೊಂದಿಗೆ ಜೊತೆಗೂಡಿ ಆಡುವುದರಿಂದ ಅವರಿಗೆ ಸಾಮಾಜಿಕ ಕೌಶಲಗಳನ್ನು ಅಭ್ಯಾಸ ಮಾಡಿಕೊಳ್ಳಲು ಹಾಗೂ ಇನ್ನಷ್ಟನ್ನು ಪಡೆದುಕೊಳ್ಳಲು ಅವಕಾಶಗಳು ಸೃಷ್ಟಿಯಾಗುತ್ತವೆ.




**ಚಿತ್ರ 1. ಅಂಗನವಾಡಿಯೊಂದರಲ್ಲಿ ನಾಟಕದಾಟದ ಮೂಲೆ.**

## ಕಟ್ಟಡಕಂತೆ (ಇಟ್ಟಿಗೆ) ಮೂಲೆ

ಇಟ್ಟಿಗೆ ತುಂಡನ್ನು ಹೋಲುವ ಕಟ್ಟಡಕಂತೆಗಳೊಂದಿಗಿನ ಆಟ ಮಕ್ಕಳಿಗೆ ರಚನಾತ್ಮಕ ಹಾಗೂ ಸೃಜನಾತ್ಮಕ ಆಟಕ್ಕೆ ಅವಕಾಶ ಸೃಷ್ಟಿಸುತ್ತದೆ. ಈ ತುಂಡುಗಳೊಂದಿಗೆ ಆಡುವುದರ ಮೂಲಕ ಮಕ್ಕಳು ಆಕಾರಗಳು, ಗಾತ್ರಗಳು, ಮತ್ತು ಬಣ್ಣಗಳ ಕುರಿತು ಅರಿತುಕೊಳ್ಳುತ್ತಾರೆ. ಅವರು ಇಟ್ಟಿಗೆಗಳನ್ನು ಹೋಲಿಸಿ ನೋಡಬಹುದು, ಜೋಡಿಸಿಡಬಹುದು, ಅಥವಾ ಪರಿಶ್ರಮಪಟ್ಟು ಕಟ್ಟಡಗಳು ಮತ್ತು ಮಾದರಿಗಳ ನಿರ್ಮಾಣ ಮಾಡಬಹುದು. ವಿವಿಧ ಬಗೆಯ ರಚನೆಗಳ ನಿರ್ಮಾಣ ಮಾಡುವಾಗ ಇಟ್ಟಿಗೆ ತುಂಡುಗಳು ಮಕ್ಕಳನ್ನು ರಚನಾತ್ಮಕ ರೀತಿಯಲ್ಲಿ ಯೋಚಿಸುವಂತೆ ಮಾಡುತ್ತವೆ. ಇವಿಷ್ಟೇ ಅಲ್ಲದೆ, ಕೆಲವೊಮ್ಮೆ, ಮಕ್ಕಳು ಜೊತೆ ಸೇರಿ ಕಟ್ಟಡ ನಿರ್ಮಾಣ ಮಾಡುತ್ತಾರೆ. ಇದು ಅವರು ಪರಸ್ಪರ ಮಾತುಕತೆ ನಡೆಸುತ್ತಾ, ಒಂದು ತಂಡವಾಗಿ ಕೆಲಸ ಮಾಡುವುದನ್ನು ಅಗತ್ಯವಾಗಿಸುತ್ತದೆ. ಸಮಸ್ಯೆಯನ್ನೊಡ್ಡುವ ಆಟಿಕೆ (ಪಜಲ್)ಗಳು (ಉದಾಹರಣೆಗೆ, ಶಾಲಾಪೂರ್ವ ಹಂತದ ಮಕ್ಕಳಿಗೆ ಮರದ ಬೆಣೆಗಳು ಹಾಗೂ ಜಿಗ್ಸಾ, ಇತ್ಯಾದಿ)  ಅವುಗಳನ್ನು ಬಿಡಿಸಲು ಮಕ್ಕಳು ಅನ್ವೇಷಣೆ ಮಾಡುವಂತೆ, ಯೋಚಿಸುವಂತೆ, ನೆನಪಿಸಿಕೊಳ್ಳುವಂತೆ ಹಾಗೂ ವಿವಿಧ ರೀತಿಯಲ್ಲಿ ಪ್ರಯೋಗ ಮಾಡಿ ನೋಡುವಂತೆ ಮಾಡುತ್ತವೆ. ಈ ಮೂಲೆಯು ವಸ್ತುಗಳನ್ನು ಹೊಂದಿಸುವುದು, ವಿಂಗಡಿಸುವುದು, ಹೋಲಿಸುವುದು, ಅನುಕ್ರಮ ಜೋಡಣೆ, ಮತ್ತು ವಿನ್ಯಾಸ ಮಾಡುವಂತಹ ಚಟುವಟಿಕೆಗಳಿಗೆ ಅವಕಾಶ ನೀಡುತ್ತದೆ.

## ಭಾಷೆ ಹಾಗೂ ಸಾಕ್ಷರತೆಯ ಮೂಲೆ

ಗ್ರಂಥಾಲಯ ಮೂಲೆಯೆಂದೂ ಕರೆಯಲ್ಪಡುವ ಈ ಮೂಲೆಯು ಓದುವುದಕ್ಕೂ ಮೊದಲಿನ ಕೌಶಲಗಳನ್ನು ಬೆಳೆಸಿಕೊಳ್ಳುವ ಸಲುವಾಗಿ ಹಾಗೂ ಮಕ್ಕಳನ್ನು ಮುದ್ರಿತ ಜಗತ್ತಿಗೆ ಪರಿಚಯಿಸುವ ಸಲುವಾಗಿ ಇದೆ. ಹಾಗಾಗಿ, ಈ ಮೂಲೆಯಲ್ಲಿರುವ ವಸ್ತುಗಳೆಂದರೆ ಮುದ್ರಿತ ಸಾಮಗ್ರಿಗಳು: ಚಿತ್ರಪಟಗಳು, ಸಂಭಾಷಣೆಗಳ ಚಾರ್ಟ್, ಮತ್ತು ಪುಸ್ತಕಗಳು. ಇದು ಮಕ್ಕಳು ಹಲವು ಬಗೆಯ ಸಾಮಗ್ರಿಗಳಿಗೆ ತೆರೆದುಕೊಳ್ಳುವಂತೆ ಮಾಡುತ್ತದೆ ಹಾಗೂ ತನ್ಮೂಲಕ ಅವರ ಕಲ್ಪನೆಯ ಹರಹನ್ನು ವಿಸ್ತರಿಸಿ, ಕಥೆಗಳನ್ನು ಸೃಷ್ಟಿಸುವುದಕ್ಕೆ ಬೇಕಾಗುವ ಅಂದಾಜು ಮಾಡುವ ಕೌಶಲವನ್ನು ಮೊನಚಾಗಿಸುತ್ತದೆ. ಕಾಲ್ಪನಿಕ ಕಥೆಗಳುಳ್ಳ, ಪ್ರಾಣಿಗಳ ಕಥೆಗಳುಳ್ಳ ಪುಸ್ತಕಗಳ ಮೇಲೆ ಕಣ್ಣಾಡಿಸುವುದು ಈ ಹಂತದಲ್ಲಿ ಅವರಿಗೆ ಅಗಾಧ ಆನಂದ ತರುತ್ತದೆ. ಈ ಅವಕಾಶವನ್ನು ಇನ್ನಷ್ಟು ವಿಸ್ತರಿಸಲು, ಕಥೆಯನ್ನು ಹೇಳಿದ ನಂತರ ಅಥವಾ ಮಕ್ಕಳೊಂದಿಗೆ ದಾರಿತೋರಿಸಿ ನಡೆಸಿದ ಮಾತುಕತೆಯ ನಂತರ, ಅಧ್ಯಾಪಕರು ಕಥೆ ಅಥವಾ ಚಿತ್ರಪುಸ್ತಕಗಳನ್ನು / ಫ್ಲ್ಯಾಶ್ ಕಾರ್ಡ್‌ಗಳನ್ನು ಭಾಷೆಯ ಮೂಲೆಯಲ್ಲಿ ಇರಿಸಬಹುದು ಹಾಗೂ ಅವುಗಳನ್ನು ಬಳಸುವಂತೆ ಮಕ್ಕಳನ್ನು ಪ್ರೋತ್ಸಾಹಿಸಬಹುದು. ಇದು ಮಕ್ಕಳನ್ನು ಅದೇ ಪುಸ್ತಕವನ್ನು ಹುಡುಕಿ ಓದುವಂತೆ ನೆರವಾಗುವುದರೊಂದಿಗೆ ತಮ್ಮದೇ ಪದಗಳಲ್ಲಿ ಕಥೆ ಹೇಳುವಂತೆ ಪ್ರೇರೇಪಿಸಬಹುದು. ಇದರೊಂದಿಗೆ ಪುಸ್ತಕಗಳನ್ನು ಹೇಗೆ ‘ನಿಭಾಯಿಸುವುದು’ ಎನ್ನುವುದನ್ನು ಕಲಿಸಲೂ ಇದು ಒಂದು ಉತ್ತಮ ರೀತಿ ಎನಿಸುತ್ತದೆ. ಅಂದರೆ, ಪುಸ್ತಕದ ಮುಖಪುಟ, ಕೊನೆಯ ಪುಟ, ಓದುವಾಗ ಪುಟಗಳನ್ನು ತಿರುಗಿಸಬೇಕಿರುವ ದಿಕ್ಕು, ಇತ್ಯಾದಿ. ಇದು ಅತ್ಯಂತ ಬೆಲೆಬಾಳುವ ಕೆಲಸವಾಗಿದೆ. ಏಕೆಂದರೆ, ಇದು ನಾವು ಮಾತನಾಡುವುದನ್ನು ಬರೆಹ ರೂಪದಲ್ಲಿ ಹೇಗೆ ಪ್ರತಿನಿಧಿಸಬಹುದು ಎನ್ನುವುದನ್ನೂ ತೋರಿಸುತ್ತದೆ. ಈ ಕೌಶಲವನ್ನು ಮುಂದೆ ಮಕ್ಕಳು ಕರಗತ ಮಾಡಿಕೊಳ್ಳುತ್ತಾರೆ.



**ಚಿತ್ರ 2. ಭಾಷೆ ಹಾಗೂ ಸಾಕ್ಷರತೆಯ ಮೂಲೆಯೊಂದರಲ್ಲಿ ಮಕ್ಕಳು ತಾವಾಗಿಯೇ ಪುಸ್ತಕಗಳನ್ನು ನೋಡುತ್ತಿದ್ದಾರೆ.**



**ಚಿತ್ರ 3. ಸೃಜನಾತ್ಮಕ ಮೂಲೆಯಲ್ಲಿ ಚಟುವಟಿಕೆಗಳಲ್ಲಿ ತೊಡಗಿರುವ ಮಕ್ಕಳು.**

## ರಚನಾತ್ಮಕ ಮೂಲೆ

ಈ ಮೂಲೆಯಲ್ಲಿ, ಮಕ್ಕಳು ಬಣ್ಣಗಳು, ಕಾಗದ, ಬ್ರಶ್ ಹಾಗೂ ಕ್ರೇಯಾನ್ ಬಳಸುತ್ತಾ ತಮ್ಮ ರಚನಾತ್ಮಕತೆಯನ್ನು ಪೋಷಿಸುವ ಅವಕಾಶ ಪಡೆಯುತ್ತಾರೆ. ಈ ಚಟುವಟಿಕೆಯಲ್ಲಿ ತೊಡಗಿದ್ದಾಗ, ರಚನಾತ್ಮಕ ಚಟುವಟಿಕೆಗಳಲ್ಲಿ ಆಸಕ್ತಿ ಹುಟ್ಟುಹಾಕಬಲ್ಲ ಹಲವು ಬಗೆಯ ಬಣ್ಣಗಳೊಂದಿಗೆ ಕೆಲಸ ಮಾಡುವ ಅವಕಾಶ ಮಕ್ಕಳಿಗೆ ಸಿಗುತ್ತದೆ. ಮಕ್ಕಳ ಮೆದುಳು, ಸ್ನಾಯು ಹಾಗೂ ನರಗಳು ಜೊತೆಯಾಗಿ ಕೆಲಸ ಮಾಡುವ ಸೂಕ್ಷ್ಮ ಚಾಲಕ ಕೌಶಲಗಳ ಮೇಲೆ ಅವರಿಗೆ ಹಿಡಿತ ಸಾಧಿಸಲು ಸಾಧ್ಯವಾಗುತ್ತದೆ ಹಾಗೂ ಈ ಮೂಲೆಯಲ್ಲಿ ಸಿಗುವ ಹಲವು ಬಗೆಯ ಸಾಮಗ್ರಿಗಳನ್ನು ಬಳಸುವುದರ ಮೂಲಕ ತಮ್ಮ ಯೋಚನೆಗಳನ್ನು, ಅನುಭೂತಿಗಳನ್ನು ಹಾಗೂ ಕಲ್ಪನೆಗಳನ್ನು ಅವರು ವ್ಯಕ್ತಪಡಿಸಬಹುದು. ಈ ಮೂಲೆಯು ಸೃಜನಶೀಲ ಆಲೋಚನೆ, ಸ್ವ–ಅಭಿವ್ಯಕ್ತಿ, ಪ್ರತಿನಿಧಿಸುವಿಕೆ ಮತ್ತು ಸೂಕ್ಷ್ಮ ಚಾಲಕ ಸಾಮರ್ಥ್ಯಗಳನ್ನು ಬಲಪಡಿಸುತ್ತದೆ.

## ಅಧ್ಯಾಪಕರ ಪಾತ್ರ

ಈ ಕಲಿಕೆಯ ಮೂಲೆಗಳು ಎಷ್ಟು ಪರಿಣಾಮಕಾರಿಯಾಗಿ ಬಳಕೆಯಾಗುತ್ತವೆ ಎನ್ನುವುದನ್ನು ಖಚಿತಪಡಿಸುವಲ್ಲಿ ಅಧ್ಯಾಪಕರ ಪಾತ್ರ ಹಿರಿದು. ಅವರು ತಮ್ಮ ಅಧ್ಯಾಪನದ ಯೋಜನೆಗೆ ಅನುಗುಣವಾಗಿ ಕಲಿಕೆಯ ಮೂಲೆಯನ್ನು ಜೋಡಿಸಿಕೊಳ್ಳಬೇಕಾಗುತ್ತದೆ. ಅವರು ಜೋಡಿಸಿಡುವ ಸಾಮಗ್ರಿಗಳು ತಾವು ಯೋಜಿಸಿರುವ ವಿಷಯ ಹಾಗೂ ಚಟುವಟಿಕೆಗಳಿಗೆ ಪೂರಕವಾಗಿರಬೇಕಾಗುತ್ತದೆ. ಅಧ್ಯಾಪಕರ ಆರಂಭದ ನಡೆಯ ನಂತರ, ಮಕ್ಕಳನ್ನು ವಿವಿಧ ಕಲಿಕೆಯ ಮೂಲೆಗಳಲ್ಲಿ 'ಆಟ' ಆಡುವಂತೆ ಹೇಳಿದಾಗ, ಅವರ ಕಲಿಕೆಯು ಅಲ್ಲಿ ಮುಂದುವರಿಯುವುದು ಮಾತ್ರವಲ್ಲದೆ, ಗಟ್ಟಿಯಾಗುತ್ತದೆ. ಅಧ್ಯಾಪಕರು ಹೀಗೂ ಮಾಡಬಹುದು:

- ತಮ್ಮ ಆಲೋಚನೆಗಳನ್ನು ಇತರ ಮಕ್ಕಳೊಂದಿಗೆ ಹಾಗೂ ಇತರ ಅಧ್ಯಾಪಕರೊಂದಿಗೆ ಹಂಚಿಕೊಳ್ಳುವಂತೆ ಮಕ್ಕಳನ್ನು ಪ್ರೋತ್ಸಾಹಿಸುವುದು.

- ಮುಕ್ತ ಅಂತ್ಯದ ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳನ್ನು ಮಾತುಕತೆಯಲ್ಲಿ (ಹೌದು ಅಥವಾ ಇಲ್ಲ ಅನ್ನುವುದಕ್ಕಿಂತ ಹೆಚ್ಚಿನದನ್ನು ಹೇಳಬೇಕಿರುವಂತಹವುಗಳಲ್ಲಿ) ತೊಡಗಿಸು-ವುದು ಮತ್ತು ಮಕ್ಕಳ ಅನುಭವಗಳಿಗೆ ವೇದಿಕೆ ಕಲ್ಪಿಸುವುದು.

- ಹೊಸ ಆಲೋಚನೆಗಳು ಮತ್ತು ಸಾಮಗ್ರಿಗಳನ್ನು ಪರಿಚಯಿಸುವುದರ ಮೂಲಕ ಮಕ್ಕಳ ಕಲಿಕೆಯನ್ನು ವಿಸ್ತರಿಸುವುದು.

- ಮಕ್ಕಳೊಂದಿಗೆ ಸಹಕಾರಿ ಆಟವನ್ನು ಮಾಡುವ ಮೂಲಕ ಸಮಾಜಮುಖಿ ವರ್ತನೆಯ ಮಾದರಿಯನ್ನು ಮಕ್ಕಳ ಮುಂದಿರಿಸುವುದು.

- ಸಮಸ್ಯೆ ಬಗೆಹರಿಸುವ ಮಕ್ಕಳ ಪ್ರಯತ್ನಗಳಿಗೆ ಬೆಂಬಲ ನೀಡುವುದು.

- ಮಕ್ಕಳ ಕೌಶಲಗಳು, ಬೆಳವಣಿಗೆ ಹಾಗೂ ಆಸಕ್ತಿಗಳನ್ನು ಅವಲೋಕಿಸುವುದು.

- ಆ ಅವಲೋಕನಗಳನ್ನು, ಯೋಜನೆ ಹಾಗೂ ದಾಖಲೆ ಮಾಡುವಲ್ಲಿ ಬಳಸಲು ಬರೆದಿಟ್ಟುಕೊಳ್ಳುವುದು.

- ಮರುದಿನಕ್ಕೆ ಅಥವಾ ಮುಂದಿನ ವಾರಕ್ಕೆ ಆಯೋಜನೆಗಳನ್ನು ಮಾಡುವಾಗ ತಮ್ಮ ಅವಲೋಕನಗಳ ಆಧಾರದ ಮೇಲೆ ಮಾಹಿತಿಯುಕ್ತ ನಿರ್ಧಾರಗಳನ್ನು ಮಾಡುವುದು.

## ಅನುಸರಣೆಯ ಚಟುವಟಿಕೆಗಳು

ಚಟುವಟಿಕೆಗಳ ಮೂಲಕ ಮಕ್ಕಳಿಗೆ ಸಿಗುವ ಕಲಿಕೆಯನ್ನು ಗಟ್ಟಿಗೊಳಿಸುವಲ್ಲಿ ಅನುಸರಣೆಯ ಚಟುವಟಿಕೆಗಳು ಮಹತ್ತರ ಪಾತ್ರ ವಹಿಸುತ್ತವೆ. ಉದಾಹರಣೆಗೆ, ಒಂದು ಮಾತುಕತೆ, ಕಥೆ ಅಥವಾ ಪ್ರಕೃತಿ ನಡಿಗೆಯ ನಂತರ, ಅಧ್ಯಾಪಕರು ಮಕ್ಕಳಿಗೆ ತಾವು ಕಲಿತಿರುವ ಪರಿಕಲ್ಪನೆಯನ್ನು ವಿಸ್ತರಿಸಲು, ಮರುಪ್ರಸ್ತುತಿ ಮಾಡಲು ಹಾಗೂ ಅನ್ವಯ ಮಾಡಲು ಅವಕಾಶಗಳನ್ನು ಕಲ್ಪಿಸಿಕೊಡಬಹುದು.

## ಮಾತುಕತೆಯ ನಂತರ

ಮಕ್ಕಳ ಜೊತೆಗಿನ ಮಾತುಕತೆಯನ್ನು ಪೂರ್ಣಗೊಳಿಸಿದ ನಂತರ ಅಧ್ಯಾಪಕರು ಮಕ್ಕಳಿಗೆ ಚಿತ್ರದ ಕಾರ್ಡುಗಳು, ಪುಸ್ತಕಗಳು, ಚಾರ್ಟುಗಳು ಹಾಗೂ ಅವರು ಉಪಯೋಗಿಸಿರುವ ಇತರ ಅಸಲಿ ವಸ್ತುಗಳನ್ನು ಪರಿಶೋಧಿಸಲು ಅವಕಾಶಗಳನ್ನು ನೀಡಬಹುದು. ಈ ಮೂಲಕ ಮಕ್ಕಳು ತಾವು ಅರ್ಥೈಸಿರುವುದನ್ನು ಚರ್ಚೆಯೊಳಕ್ಕೆ ತರುವಂತೆ ಹಾಗೂ ತಮ್ಮ ಅನುಭವಗಳನ್ನು ಹಂಚಿಕೊಳ್ಳುವಂತೆ ನೋಡಿಕೊಳ್ಳಬಹುದು. ಇದು ಅವರು ಅರ್ಥ ಮಾಡಿಕೊಂಡಿರುವುದನ್ನು ಇನ್ನಷ್ಟು ಸದೃಢವಾಗಿಸಲು ನೆರವಾಗುತ್ತದೆ.

## ಪ್ರಾಸದ ಅವಧಿಯ ನಂತರ

ಪ್ರಾಸಪದಗಳನ್ನು ಅಭಿನಯದೊಂದಿಗೆ ಹಾಡುವುದರೊಂದಿಗೆ, ಅಧ್ಯಾಪಕರು ಪ್ರಾಸವಿರುವ ಭಿತ್ತಿಚಿತ್ರವನ್ನು ಹಾವಭಾವ-ಗಳೊಂದಿಗೆ ರಾಗವಾಗಿ ಓದಿಹೇಳಬಹುದು. ಇದು ಆಡುಮಾತನ್ನು ಬರೆಹ ರೂಪದ ಪಠ್ಯದೊಂದಿಗೆ ಹಾಗೂ ಭಿತ್ತಿಚಿತ್ರದಲ್ಲಿರುವ ಚಿತ್ರಗಳೊಂದಿಗೆ ಹೊಂದಿಸಲು ಮಕ್ಕಳಿಗೆ ನೆರವಾಗಬಲ್ಲದು. ಇದು ಗ್ರಹಿಕೆಯ ಸಾಮರ್ಥ್ಯವನ್ನೂ ಗಟ್ಟಿಗೊಳಿಸುತ್ತದೆ.

## ಕಥೆ ಹೇಳುವ ಅವಧಿಯ ನಂತರ

ಕಥೆ ಹೇಳುವ ಅವಧಿಯ ನಂತರ, ಅಧ್ಯಾಪಕರು ಕಥೆಯಲ್ಲಿರುವ ಪಾತ್ರಗಳ ಚಿತ್ರವನ್ನು ಕರಿಹಲಗೆಯ ಮೇಲೆ ಬರೆಯುವಂತೆ ಮಕ್ಕಳಲ್ಲಿ ಹೇಳಬಹುದು. ಮಕ್ಕಳು ಪಾತ್ರಗಳನ್ನು ಚಿತ್ರಗಳ ಮೂಲಕ ಪ್ರತಿನಿಧಿಸಿ ಕಥೆಯನ್ನು ನೆನಪು ಮಾಡಿಕೊಳ್ಳಬಹುದು ಮತ್ತು ತಮ್ಮದೇ ಪದಗಳಲ್ಲಿ ಕಥೆ ಹೇಳಬಹುದು. ಕಲಿಕೆಯನ್ನು ಗಟ್ಟಿಗೊಳಿಸುವ ವಿಧಾನಗಳಲ್ಲಿ ಇದೂ ಒಂದು.

## ಪ್ರಕೃತಿ ನಡಿಗೆಯ ನಂತರ

ಪ್ರಕೃತಿ ನಡಿಗೆಯ ನಂತರ, ತಾವು ಕಂಡಿರುವುದನ್ನು ಚಿತ್ರಿಸುವಂತೆ ಮಕ್ಕಳಲ್ಲಿ ಹೇಳಬಹುದು. ನಡಿಗೆಯ ಸಮಯದಲ್ಲಿ ತಾವು ಸಂಗ್ರಹಿಸಿದ ವಸ್ತುಗಳಿಂದ ಅವರು ವಿನ್ಯಾಸಗಳನ್ನು ಹಾಗೂ ಬಗೆಬಗೆಯ ಚಿತ್ತಾರಗಳನ್ನೂ ಅವರು ಮಾಡಬಹುದು.

ಆರಂಭದಲ್ಲಿ ಹೇಳಿರುವಂತೆ, ಮಕ್ಕಳ ಕಲಿಕೆಯ ಪ್ರಕ್ರಿಯೆಯ ಅರಿವು, ಪರಿಶೋಧನೆ, ವಿಚಾರಣೆ, ಹಾಗೂ ಬಳಕೆ (ಹೊಸತಾಗಿ ತಿಳಿದುಕೊಂಡಿರುವ ವಿಷಯ/ಪರಿಕಲ್ಪನೆಗಳ)ಯನ್ನು ಒಳ-ಗೊಂಡಿರುತ್ತದೆ. ಅಧ್ಯಾಪಕರು ನಡೆಸಿದಂತಹ ರಚನಾತ್ಮಕ ಚಟುವಟಿಕೆಗಳ ಮೂಲಕ ಪಡೆದುಕೊಂಡಿರುವ ಕಲಿಕೆಯನ್ನು ವಿಶ್ಲೇಷಿಸಿ, ಬೆಲೆಕಟ್ಟಿ, ಅನ್ವಯಿಸಿ, ಗಟ್ಟಿಗೊಳಿಸಲು ಮಕ್ಕಳಿಗೆ ಹೇರಳವಾದ ಸಮಯ ಹಾಗೂ ಅವಕಾಶದ ಅಗತ್ಯವಿರುತ್ತದೆ.



**ದಾಸಣ್ಣ ಮರೆಡ್ಡಿ** ಅವರು ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ನಾರಾಯಣಖೇಡ ಬ್ಲಾಕಿನಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಬ್ಲಾಕ್ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆರಂಭಿಕ ಬಾಲ್ಯ ಶಿಕ್ಷಣ (ಅರ್ಲಿ ಚೈಲ್ಡ್ ಹುಡ್ ಎಜುಕೇಶನ್– ಇಸಿಇ)ದ ವಿವಿಧ ಪಾಲುದಾರರ ಕಲಿಕೆಯ ಅನುಭವವನ್ನು ಸುಗಮಗೊಳಿಸುವುದನ್ನು ಇವರು ಆನಂದಿಸುತ್ತಾರೆ. ಹಾಗೂ ಪುಟ್ಟ ಮಕ್ಕಳೊಂದಿಗೆ ಕೆಲಸ ಮಾಡುವುದು ಇವರ ನೆಚ್ಚಿನ ಕೆಲಸ. ಇಂಜಿಯರಿಂಗ್ ಪದವೀಧರರಾಗಿರುವ ಇವರು, ತಮ್ಮ ಆಸಕ್ತಿಯ ಶಿಕ್ಷಣ ಕ್ಷೇತ್ರಕ್ಕೆ ಇಳಿಯುವ ಮೊದಲು ಇನ್ಫೋಸಿಸ್ ಜೊತೆಗೆ ಮಾಹಿತಿ ತಂತ್ರಜ್ಞಾನದಲ್ಲಿ ದುಡಿದವರು. ಇವರನ್ನು ಇಲ್ಲಿ ಸಂಪರ್ಕಿಸಬಹುದು: Dasanna.mareddy@azimpremjifoundation.org



**ವಿ ಕೋಟೇಶ್ವರ ರಾವ್** ಅವರು ತೆಲಂಗಾಣದ ಜಹೀರಾಬಾದ್ ಜಿಲ್ಲೆಯಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಬ್ಲಾಕ್ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿಂದೆ ಇವರು ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಎಪಿ ಸ್ಕೂಲ್ ಚಾಯ್ಸ್ ಸ್ಟಡಿಗೆ ಸಂಯೋಜಕರಾಗಿ ಹಾಗೂ ಸಂಗಾರೆಡ್ಡಿಯ ಆರಂಭಿಕ ಬಾಲ್ಯ ಶಿಕ್ಷಣ ಉಪಕ್ರಮದ ಭಾಗವಾಗಿ ಕೆಲಸ ಮಾಡಿದ್ದಾರೆ. ಹೈದರಾಬಾದಿನ ಒಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಸಾಮಾಜಿಕ ಕಾರ್ಯದ ಸ್ನಾತಕೋತ್ತರ ಪದವಿ ಪಡೆದಿರುವ ಇವರು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದಿಂದ ‘ಇಸಿಸಿಇ’ಯಲ್ಲಿ ಡಿಪ್ಲೋಮಾ ಪಡೆದುಕೊಂಡಿದ್ದಾರೆ, ಇವರನ್ನು ಇಲ್ಲಿ ಸಂಪರ್ಕಿಸಬಹುದು: koteswara.rao@azimpremjifoundation.org

ಅನುವಾದ: **ಸ್ಮಿತಾ ಭಟ್** | ಪರಿಶೀಲನೆ: **ಮೆಲ್ವಿನ್ ಮೆಂಡೊನ್ಸಾ**